
# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಜೂನ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 6 ಪ್ರಕಟಣೆ : 9-06-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

### ಶ್ರೀಮತಿ ಶ್ಯಾಮಲಾ ರಾವ್ ಮತ್ತು ಡಾ। ಅರವಿಂದ ರಾವ್ ದಂಪತಿಗಳಿಂದ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ವಿವಿಧ ಸಮಾಜಮುಖೀ ಕಾರ್ಯಯೋಜನೆಗಳಿಗೆ ಕೃತಜ್ಞತೆ ಸಲ್ಲಿಸುತ್ತಾ ರೂ. 7,00,000/- ಮೊತ್ತದ ಕೊಡುಗೆ



ಮಂಗಳೂರಿನಲ್ಲಿ ವಾಸವಾಗಿರುವ ನಂದಿಕೂರು ಡಾ। ಅರವಿಂದ ರಾವ್ ದಂಪತಿಗಳು ತಮ್ಮ ಬಾಲ್ಯದ ವಿದ್ಯಾರ್ಜನೆಯ ಸಂದರ್ಭ ತಮಗೆ ನೈತಿಕ ಬೆಂಬಲ ನೀಡಿದ ಅತ್ತೆ ಮಾವನವರಾದ ಶ್ರೀಮತಿ ಸುಶೀಲ ಮತ್ತು ಪ್ರೊ. ಕೆ. ಆರ್. ಉಪಾಧ್ಯಾಯರವರ ಹೆಸರಿನಲ್ಲಿ ರೂ. **1,00,000/-** (ಒಂದು ಲಕ್ಷ)ದ ಆರಂಭಿಕ ಕೊಡುಗೆಯೊಂದಿಗೆ ದತ್ತುನಿಧಿಯೊಂದನ್ನು ಸ್ಥಾಪಿಸಿದ್ದಾರೆ. ಅವರು ಈಗಾಗಲೇ ಶ್ರೀ ಸಭಾದ ವಿದ್ಯಾನಿಧಿಗೆ ರೂ. **1,50,000/-** ದೇಣಿಗೆ ನೀಡಿದ್ದರು. ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯ 'ಶಿವಸದನ'ಕ್ಕೆ ಈ ಮೊದಲೇ ರೂ. **2,50,000/-** ದೇಣಿಗೆ ನೀಡಿದ್ದು ಈಗ ಮತ್ತೆ ರೂ. **2,00,000/-** ದೇಣಿಗೆ ನೀಡುವುದರ ಮೂಲಕ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯ 'ಶಿವಸದನ' ಯೋಜನೆ ತಮ್ಮ ಕೊಡುಗೆಯನ್ನು ಒಟ್ಟು ರೂ. **4,50,000/-** (ನಾಲ್ಕು ಲಕ್ಷದ ಐವತ್ತು ಸಾವಿರ)ಕ್ಕೆ ಏರಿಸಿದ್ದಾರೆ.


ಶ್ರೀಮತಿ ಶ್ಯಾಮಲಾ ಮತ್ತು ಡಾ। ಅರವಿಂದ ರಾವ್ ದಂಪತಿಗಳು ಐದು ದಶಕಗಳ ತನಗೆ ಮತ್ತು ತನ್ನ ಸಹೋದರರಿಗೆ ಹಾಗೂ ಕುಟುಂಬದ ಇತರ ಸದಸ್ಯರ ವಿದ್ಯಾರ್ಜನೆಯಲ್ಲಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾವು ನೀಡಿದ ಸಹಕಾರವನ್ನು ಕೃತಜ್ಞತಾಪೂರ್ವಕ ಸ್ಮರಿಸಿಕೊಳ್ಳುತ್ತಿದ್ದಾರೆ.

ಡಾ। ಅರವಿಂದ ರಾವ್ ದಂಪತಿಗಳ ಈ ಸಹೃದಯೀ ಕೊಡುಗೆಯನ್ನು ಶ್ರೀ ಸಭೆಯು ಆದರಪೂರ್ವಕ ಸ್ವೀಕರಿಸುತ್ತಿದೆ.
ಶ್ರೀ ಸುಬ್ರಹ್ಮಣ್ಯ ಸಭಾದ ಸಮಾಜಮುಖೀ ಕಾರ್ಯಗಳಲ್ಲಿ ಅವರ ತನು-ಮನ-ಧನಗಳ ಇನ್ನಷ್ಟು ಬೆಂಬಲವನ್ನು, ಪ್ರೋತ್ಸಾಹವನ್ನು ಬಯಸುತ್ತೇವೆ.
ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ತಮ್ಮ ಮಾತಾಪಿತರಾದ ಕೆಳಗಿನ ಕೇದಿಗೆ ಆನಂದ ರಾವ್ ಮತ್ತು ಶ್ರೀಮತಿ ಶೇಷಮ್ಮ ಸ್ಮರಣಾರ್ಥ 'ಶಿವಸದನ'ದ ತೃತೀಯ ಅಂತಸ್ತಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಘೋಷಿಸಿದಂತೆ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **5,00,000/-** (ರೂಪಾಯಿ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಮಗಳು ಶ್ರೀಮತಿ ಪ್ರೀತಿಕಾ ಕೇದಿಗೆ, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

ಚಿತ್ರ : ಮಾ। ಹಾರ್ದಿಕ್ ಕೇದಿಗೆ



ಬೆಂಗಳೂರು ನಿವಾಸಿ ಕುಂಜಾರು ಶ್ರೀ ಕೃಷ್ಣ ರಾವ್ ತಮ್ಮ ಮೊಮ್ಮಗಳು ಚಿ। ಸೌ। ಮಾನಸಾಳ ಮದುವೆಯ ಸವಿನೆನಪಿಗಾಗಿ ತಮ್ಮ ಮಗ ಶ್ರೀ ಹರಿಪ್ರಸಾದ್ ಮತ್ತು ಸೊಸೆ ಶ್ರೀಮತಿ ಗೀತಾ ಜತೆಗೂಡಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **2,00,000/-** (ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಕದ್ರಿ ನಿವಾಸಿ ಶ್ರೀಮತಿ ರೂಪಲಕ್ಷ್ಮಿಯವರು ತಮ್ಮ ತಂದೆ ಶ್ರೀ ಬಿ. ಎನ್. ಗೋಪಾಲಕೃಷ್ಣ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭದಲ್ಲಿ ಅವರ ತಾಯಿ ಶ್ರೀಮತಿ ಲೀಲಾವತಿ, ಮಗಳು ಅನುಷಾ, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಇತರ ಪದಾಧಿಕಾರಿಗಳು, ಮಹಿಳಾ ವೇದಿಕೆ, ಯುವವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

- ಮನುಷ್ಯ ಚಿರಂಜೀವಿ ಆಗಲಾರ. ಆದರೆ, ಆತನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ. ಒಂದು ಗಿಡಕ್ಕೆ ನೀರು ಎಷ್ಟು ಅವಶ್ಯವೋ ಹಾಗೆಯೇ ಒಂದು ಚಿಂತನೆ ಪ್ರಸರಣವಾಗುವುದು ಅಷ್ಟೇ ಅಗತ್ಯ. ಇಲ್ಲದಿದ್ದರೆ ಎರಡೂ ಸಾಯುತ್ತವೆ.

– ಡಾ. ಬಿ. ಆರ್. ಅಂಬೇಡ್ಕರ್

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
● ನಾಗರಾಜ್ ವರ್ಕಾಡಿ ● ರಘುವೀರ್ ಪೆರ್ಡೂರು
● ಟಿ. ಬಿ. ಮೋಹನ್ ರಾವ್ ● ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
● ಕರುಣ್ ರಾವ್ ಬೆಳ್ಳೆ ● ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
● ಚೇತನ್ ಶರ್ಮ ● ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

**Whatsapp : 7795116598 Mob. : 9343361618**
**e-mail : jnanashakthisss@gmail.com**




'ಶಿವಸದನ'ವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಈಗಾಗಲೇ 34ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ.

**ಆಸಕ್ತರಿಗೆ ಮಾಹಿತಿ ನೀಡಿ ಸಂಪರ್ಕಿಸಿರಿ :**

**ಶ್ರೀ ಕರುಣ್ ರಾವ್ ಬೆಳ್ಳೆ ✆ : 7337634359**
**ಶ್ರೀ ಪಿ. ಶ್ರೀಕಾಂತ್ ರಾವ್ ✆ : 7795116598**


# ಶ್ರದ್ಧಾಂಜಲಿ




## ಪಾದೆಬೆಟ್ಟು ದೇವ ರಾವ್

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಒಂದು ದಶಕಗಳಿಗಿಂತಲೂ ಹೆಚ್ಚು ಕಾಲ ಆಡಳಿತ ಮಂಡಳಿಯ ಸದಸ್ಯರಾಗಿದ್ದ ಪ್ರೊ। ಪಾದೆಬೆಟ್ಟು ದೇವ ರಾವ್ ಅವರು ತಾ. 5–6–2022ರಂದು ತಮ್ಮ 94ನೇ ಹರೆಯದಲ್ಲಿ ವಿಧಿವಶರಾದರು. ಸುರತ್ಕಲ್‌ನ ರೀಜನಲ್ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಪ್ರೊಫೆಸರ್ ಆಗಿದ್ದ ಶ್ರೀಯುತರು ತನ್ನ ಬದುಕಿನುದ್ದಕ್ಕೂ ಸಕ್ರಿಯರಾಗಿದ್ದು, ಗಾಯತ್ರೀ ಮಂತ್ರದ ಬಗ್ಗೆ ವಿಮರ್ಶಾತ್ಮಕ ಪುಸ್ತಕವನ್ನು ಪ್ರಕಟಿಸಿದ್ದರು. ಮಕ್ಕಳ ಮನೋವಿಕಾಸಕ್ಕೆ ಸಹಕಾರಿಯಾಗಲು 'ಸರಳ ವಿಜ್ಞಾನ ಕಿರುಹೊತ್ತಿಗೆ'ಗಳನ್ನು ಪ್ರಕಟಿಸುತ್ತಿದ್ದರು. 'ವಿಜ್ಞಾನ ಲೋಕ' ಎಂಬ ಮಾಸಪತ್ರಿಕೆಯೊಂದನ್ನು ಮೂರು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದ್ದರು. ಸ್ಥಾನಿಕ ಸಮುದಾಯದ ಗತ ಇತಿಹಾಸದ ಬಗ್ಗೆ ಅಪಾರ ಅಧ್ಯಯನ ಮಾಡುತ್ತಿದ್ದ ಇವರು, ಈ ಬಗ್ಗೆ ಸಮಾಜ ಬಾಂಧವರಲ್ಲಿ ಈ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತಿದ್ದರು.


ಎರಡು ಗಂಡು ಮಕ್ಕಳು ಮತ್ತು ಎರಡು ಹೆಣ್ಣು ಮಕ್ಕಳ ಸಂಸಾರ ಹಾಗೂ ಅಪಾರ ಅಭಿಮಾನಿಗಳನ್ನು ಬಿಟ್ಟಗಲಿದ, ಸಂಶೋಧನೆ, ಸಂವಹನವನ್ನೇ ಬದುಕಿನ ತಪವನ್ನಾಗಿಸಿಕೊಂಡ ಶ್ರೀ ದೇವ ರಾವ್ ಅವರ ಸಾರ್ಥಕ ಬದುಕನ್ನು ಜ್ಞಾನಶಕ್ತಿ ಪತ್ರಿಕೆಯು ಶ್ರದ್ಧಾಂಜಲಿಯೊಂದಿಗೆ ಗೌರವಿಸುತ್ತದೆ.

# ಜಿಲ್ಲಾ ಮಟ್ಟದ ಶ್ರೀ ಶಂಕರಾಚಾರ್ಯ ಜಯಂತಿ



ಶಾಂಕರ ತತ್ವ ಪ್ರಸಾರ ಅಭಿಯಾನ ಮತ್ತು ಸುಬ್ರಹ್ಮಣ್ಯ ಸಭಾ ಮುಂದಾಳತ್ವದಲ್ಲಿ ಸಂಸ್ಕೃತ ಸಂಘ, ವೇದಾಂತ ಭಾರತಿ ಮುಂತಾದ ಮಂಗಳೂರಿನ ಅನೇಕ ಸಂಘ ಸಂಸ್ಥೆಗಳು ಮತ್ತು ಸಮಾಜಗಳ ಸಹಯೋಗದೊಂದಿಗೆ ದಿನಾಂಕ 15–5–2022ನೇ ಭಾನುವಾರ ಶಂಕರ ಜಯಂತಿಯನ್ನು ಆಚರಿಸಲಾಯಿತು.

ಬೆಳಗ್ಗೆ ಗಂಟೆ 7–30ರಿಂದ ಶ್ರೀ ಗಣಪತಿ ಹೋಮ, ಅಷ್ಟೋತ್ತರ ಪಾರಾಯಣ, ಭಜನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಸಂಜಯ ಕಾರಂತ್ ಮತ್ತು ಶ್ರೀಮತಿ ಸುಜಾತಾ ಕಾರಂತರು ಹೋಮದ ಯಜಮಾನರಾಗಿ ಪ್ರಾಯೋಜಿಸಿದರು. ಉಪಾಹಾರದ ನಂತರ ಶ್ರೀ ಸದಾಶಿವ ಶಾಸ್ತ್ರಿಗಳ ನೇತೃತ್ವದಲ್ಲಿ ರುದ್ರಾಭಿಷೇಕವು ಸಂಪನ್ನವಾಯಿತು.



ಅದೇ ಸಮಯದಲ್ಲಿ ಡಾ। ಸುರೇಖಾ ಅವರ ನೇತೃತ್ವದಲ್ಲಿ ಸಂಪೂರ್ಣ ಭಗವದ್ಗೀತಾ ಪಾರಾಯಣ ನಡೆಯಿತು. ಅನಂತರ ಶ್ರೀ ನಾಗರಾಜ್ ರಾವ್ ಮತ್ತು ಶ್ರೀಮತಿ ಭುವನೇಶ್ವರಿ ದಂಪತಿಗಳ ಯಜಮಾನತ್ವದಲ್ಲಿ ಶ್ರೀ ಸತ್ಯನಾರಾಯಣ ದೇವರ ಪೂಜೆ ನೆರವೇರಿತು. ಅಷ್ಟಾವಧಾನ ಸೇವೆ, ವೇದೋಪನಿಷತ್ತು, ವ್ಯಾಕರಣ ಪಾರಾಯಣ, ಸಂಗೀತ ಸೇವೆಗಳು ನೆರವೇರಿತು.

ಪಾರಾಯಣಗಳನ್ನು ಚಿ. ಯಾಜ್ನಿಕ, ಚಿ. ಚಿನ್ಮಯ, ಕಠೋಪನಿಷತ್ತು ಶ್ರೀ ದಿವಾಣ ಕೇಶವ ಭಟ್ಟರು, ಶಾಸ್ತ್ರ (ವ್ಯಾಕರಣ) ಪಾರಾಯಣ ತುಪ್ಪೇಕಲ್ಲು ಶ್ರೀ ನರಸಿಂಹ ಶೆಟ್ಟರು, ಶಾಂಕರ ಸ್ತೋತ್ರ ಗಾಯನ ಶ್ರೀಮತಿ ವೀಣಾ ಶ್ರೀನಿವಾಸ್, ಮಾಧವೀಯ ಶಂಕರ ದಿಗ್ವಿಜಯ ಪ್ರವಚನ ಡಾ। ಶ್ರೀ ವಾಗೀಶ್ವರಿ ಶಿವರಾಂ ಇವರುಗಳು ನಡೆಸಿಕೊಟ್ಟರು.

ಶಾಂಕರ ಸ್ತೋತ್ರ ಪಠಣ ಮತ್ತು ಭಾಷಣ ಸ್ಪರ್ಧೆ ನಡೆಸಿ ವಿಜೇತ ಮಕ್ಕಳಿಗೆ ಬಹುಮಾನವನ್ನು ಸಂಸ್ಕೃತ ಸಂಘದ ಅಧ್ಯಕ್ಷರ ಮುಖಾಂತರ ವಿತರಿಸಲಾಯಿತು. ಮಧ್ಯಾಹ್ನ ಮೊದಲಿಗೆ ವೇದಾಂತ ಭಾರತಿಯ ಶ್ರೀಮತಿ ವಸುಧಾ ನಾಯಕ್ ನೇತೃತ್ವದಲ್ಲಿ ಶಂಕರ ಸ್ತೋತ್ರ ಪಠಣ, ಶಾಂಕರ ಭಜನೆಗಳು ನಂತರ ಶಾರದಾಂಬಾ ಭಜನಾ ಮಂಡಳಿಯವರು, ಶಿವರಂಜಿನಿ ಭಜನಾ ಮಂಡಳಿ, ಬೊಕ್ಕಸ ಇವರುಗಳ ವತಿಯಿಂದ ಶೃಂಗೇರಿ ಪದ್ಧತಿಯ ಭಜನೆಗಳು, ಶ್ರೀಮತಿ ಮನಾಲಿ ಪವನ್ ರಾವ್ ಅವರ ಮನಮೋಹಕ ನೃತ್ಯ ಕಾರ್ಯಕ್ರಮಗಳು ಸಂಪನ್ನಗೊಂಡವು. ನಂತರ ಶ್ರೀ ಶಿಕಾರಿಪುರ ಕೃಷ್ಣಮೂರ್ತಿ, ದಿವಾಣ ಶ್ರೀ ಕೇಶವ ಭಟ್ಟರು ಹಾಗೂ ಶ್ರೀಮತಿ ಕುಸುಮಾ ನವೀನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಪುಟಾಣಿಗಳಿಂದ ಮೂಡಿಬಂದ 'ಶಂಕರಂ ಲೋಕ ಶಂಕರಂ' ಪ್ರಹಸನವು ಅದ್ಭುತವಾಗಿತ್ತು. ಬೆಳಗ್ಗೆ ಗಂಟೆ 7–30ರಿಂದ ಸಂಜೆ 5–00 ಗಂಟೆಯವರೆಗೆ ನಡೆದ ಈ ಕಾರ್ಯಕ್ರಮಗಳಲ್ಲಿ ಅನೇಕ ಗಣ್ಯರು, ವಿವಿಧ ಸಮಾಜದವರು, ಭಕ್ತರು ಮತ್ತು ವಿವಿಧ ಮಂಡಳಿಗಳವರು ಭಾಗವಹಿಸಿದ್ದರು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ವಿವಿಧ ಭಜನಾಮಂಡಳಿಗಳು, ವೇದಾಂತ ಭಾರತಿ, ಭಗವದ್ಗೀತಾ ಪಾರಾಯಣಕರ್ತರು, ಪುಟಾಣಿಗಳು ಹಾಗೂ ಅವರ ಪೋಷಕರು, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ವೈದಿಕರು ಹಾಗೂ ಪ್ರಾಯೋಜಕರು ಮತ್ತು ಸಹಕರಿಸಿದ ಎಲ್ಲರಿಗೂ ವಿಶೇಷವಾಗಿ ಅಭಿಯಾನದ ರಾಜ್ಯ ಸಂಚಾಲಕ ಶ್ರೀ ಶಿಕಾರಿಪುರ ಕೃಷ್ಣಮೂರ್ತಿ ಅವರಿಗೂ ಅಭಿಯಾನ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶ್ರೀ ಪಿ. ಶ್ರೀಕಾಂತ್ ರಾವ್ ಧನ್ಯವಾದಗಳನ್ನು ನೀಡಿದರು.

## ಒಂದು 'ಹನಿ' ಕಥೆ

ನಾನು ರಾಣಿ - ನಾನು ಹೆಣ್ಣು, ಸೃಷ್ಟಿ - ಸ್ಥಿತಿ - ಲಯ ಇದಕ್ಕೆಲ್ಲ ನಾನೇ ಕಾರಣಕರ್ತಳು. ನಾನು ಜನಿಸಿದಾಗಲೇ ರಾಣಿಯಾಗಿಯೇ ಹುಟ್ಟಿದವಳು. ನನ್ನ ಪ್ರಪಂಚದಲ್ಲಿ ಸಾವಿರಾರು ಕೆಲಸಗಾರರಿದ್ದಾರೆ. ಅವರೆಲ್ಲ ಸ್ತ್ರೀಯರು ತುರ್ತುಸ್ಥಿತಿಯಲ್ಲಿ ಅವರು ಆತ್ಮಾಹುತಿ ದಳದ ಸದಸ್ಯರೂ ಆಗಿರುತ್ತಾರೆ. ನನ್ನ ಬಾಲ್ಯದ ವಾಯುವಿಹಾರದ ಉದ್ದಕ್ಕೂ ನನ್ನ ಸುತ್ತ ರಕ್ಷಣೆಗಾಗಿ ಸ್ತ್ರೀ ಯೋಧರು ಸ್ವಯಂಪ್ರೇರಣೆಯಾಗಿ ರಕ್ಷಣಾ ಕವಚವನ್ನೇ ನಿರ್ಮಿಸುತ್ತಾರೆ. ನನ್ನ ಮಕ್ಕಳಿಗೆ ನನ್ನ ಬಗ್ಗೆ ವಿಶೇಷ ಕಾಳಜಿ. ನನ್ನ ಪ್ರಪಂಚದಲ್ಲಿ ಗಂಡುಗಳಿಲ್ಲ. ನನಗೆ ಸಂತಾನದ ಅವಶ್ಯಕತೆ ಇದ್ದಾಗ ನಾನೇ ಗಂಡುಗಳನ್ನು ಸೃಷ್ಟಿಸುತ್ತೇನೆ. ನನ್ನೊಂದಿಗೆ ಓಟದ ಸ್ಪರ್ಧೆಯಲ್ಲಿ ಗೆದ್ದವನು ನನ್ನ ಗಂಡನಾಗುತ್ತಾನೆ. ಆದರೆ ನನ್ನ ಮದುವೆಯ ಮರುದಿನ ಅದು ಅವನ ಮಸಣದ ದಿನವಾಗಿರುತ್ತದೆ. ನಮ್ಮ ಪ್ರಪಂಚದಲ್ಲಿ ಆಹಾರದ ಕೊರತೆಯಾದಾಗ ಉಳಿದ ಗಂಡುಜೀವಿಗಳನ್ನು ನಮ್ಮ ಕೆಲಸಗಾರರೇ ನಾಶಮಾಡುತ್ತಾರೆ ಮತ್ತೆ ಅವರಿಗೆ ಬದುಕುವ ಅರ್ಹತೆಯಿಲ್ಲ. ನಮಗೆ ಗಂಡುಗಳು ಬೇಕಾದದ್ದು ಸಂತಾನವೃದ್ಧಿಗೆ ಮಾತ್ರ. ನಾನು ಮುದಿಯಾದಾಗ ನಾನು ಇನ್ನೊಂದು ರಾಣಿಯನ್ನೇ ಸೃಷ್ಟಿಸಬಲ್ಲೆ. ನಾನು ಹೆಣ್ಣು, ಸೃಷ್ಟಿ - ಸ್ಥಿತಿ - ಲಯ ಎಲ್ಲವೂ ನನ್ನ ಅಂಕೆಯಲ್ಲಿದೆ.

ಈ ಮಧ್ಯೆ ದುರ್ಘಟನೆಯೊಂದು ನಡೆದು ಹೋಯಿತು. ಮಾನವ ಜೀವಿಯೊಂದು ನಮ್ಮ ಸಂಸಾರದ ಮೇಲೆ ದಾಳಿ ಮಾಡಿತು. ನಮ್ಮ ಆಹಾರದ ಕಣಜವನ್ನೇ ಹೊತ್ತೊಯ್ಯಲು ಹವಣಿಸಿತು. ಆತ್ಮಾಹುತಿ ದಳದ ನನ್ನ ಮಕ್ಕಳು ಆತನ ಮೇಲೆ ತೀವ್ರ ಪ್ರಹಾರ ನಡೆಸಿದರು. ಅವನನ್ನು ಬೆನ್ನಟ್ಟಿ ಹೊಡೆದುರುಳಿಸಿದರು. ಈ ದಾಳಿಯಲ್ಲಿ ನನ್ನ ಮಕ್ಕಳ ಹೆಣದ ರಾಶಿಯೇ ಬಿದ್ದಿತ್ತು. ದುಃಖಿತಪ್ತಳಾಗಿ ಅಳಿದುಳಿದ ನನ್ನ ಕುಟುಂಬದೊಂದಿಗೆ ಅಲ್ಲಿಂದ ವಲಸೆ ಹೋದೆ.

**ಮರುದಿನದ ಮಾನವರ ಪತ್ರಿಕೆಗಳಲ್ಲಿ 'ಜೇನುನೊಣದ ಕಡಿತದಿಂದ ವ್ಯಕ್ತಿಯೊಬ್ಬನ ಸಾವು' ಅಂತ ಪ್ರಕಟವಾಗಿತ್ತು.**

**ಸತ್ತ ಸಾವಿರಾರು ನನ್ನ ಮಕ್ಕಳ ಬಗ್ಗೆ ಯಾವ ಪತ್ರಕರ್ತನಿಗೂ ಏನೆಂದೂ ಬರೆಯಬೇಕೆಂದು ಅನ್ನಿಸಿರಲಿಲ್ಲ. ಯಾಕೆಂದರೆ ಅವರು ಮನುಷ್ಯರು.**

*– ರಗು*

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ನಗರಸಭಾ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ ನಮ್ಮ ಸಮಾಜದ ಗಣ್ಯರಾದ ಶ್ರೀ ಐ. ಪಿ. ಕೆ. ಶರ್ಮಾರವರ ಸುಪುತ್ರಿ ಪ್ರೊಫೆಸರ್ ಐ. ಕೆ. ವಸುಂಧರಾ ಶರ್ಮಾ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000/– ದೇಣಿಗೆ ನೀಡಿದ್ದಾರೆ ಹಾಗೂ ಶ್ರೀ ಸಭಾದಲ್ಲಿ ಈಗಾಗಲೇ ವಿದ್ಯಾನಿಧಿಯನ್ನು ಸ್ಥಾಪಿಸಿ ಸರ್ವರಿಗೂ ಮಾದರಿಯಾಗಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಸಂತೋಷ್ ಯು., ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

## ಅಜಾತಶತ್ರು ಎ. ರಾಮ ರಾವ್ ಇವರು ಇನ್ನಿಲ್ಲ




ಕಡಲಗರ್ಭದ ಚಿಪ್ಪುಗಳಲ್ಲಿ ಮುತ್ತನ್ನು ಹುಡುಕಿದಂತೆ, ಎಲ್ಲಾ ಚಿಪ್ಪುಗಳಲ್ಲಿ ಮುತ್ತುಗಳು ಇರುವುದಿಲ್ಲ. ಹುಟ್ಟಿದ್ದಕ್ಕಾಗಿ ಬದುಕಿ ಸಾಯುತ್ತಾರೆ ಬಹುಮಂದಿ. ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲದಿಂದ ಸಾಗುವವರು ಕೆಲವೇ ಮಂದಿ. ಅವರಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರೆ ಇದರ ಉಪಾಧ್ಯಕ್ಷರಾದ ಅನರ್ಘ್ಯರತ್ನ... ಅಜಾತಶತ್ರು... ಶ್ರೀ ಎ. ರಾಮ ರಾವ್ ಇವರು ನಮ್ಮ ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಸುಮಾರು 12 ವರ್ಷಗಳಿಂದ ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಮ ರಾವ್ ಇವರ ನಿಧನದ ಸುದ್ದಿ ನಿಜವಾಗಿಯೂ ನಮಗೆಲ್ಲರಿಗೂ ಆಘಾತಕಾರಿ.

ವಿಧಿಯ ಕ್ರೌರ್ಯಕ್ಕೆ ಕೊನೆಯಿಲ್ಲ ಎನ್ನುವುದಕ್ಕೆ ಇದು ಸಾಕ್ಷಿಯಾಯಿತು. ದಕ್ಷತೆ ಕರ್ತವ್ಯ ನಿಷ್ಠೆಗೆ ಹೆಸರಾಗಿರುವ ಕ್ರಿಯಾಶೀಲ ಕೆಲಸಗಾರರಾಗಿ ಎಲ್ಲ ಸದಸ್ಯರು ಮತ್ತು ಆಡಳಿತ ಮಂಡಳಿಯ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದವರು. ಅತ್ಯುತ್ತಮ ಸಲಹೆಗಾರರು, ನಮ್ಮ ಪ್ರೋತ್ಸಾಹಕರು, ನಮ್ಮ ಮಾರ್ಗದರ್ಶಕರು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಸಂಘ ಉನ್ನತ ಸಾಧನೆ ಮಾಡಬೇಕೆಂಬ ತುಡಿತದೊಂದಿಗೆ ನಿರಂತರ ಶ್ರಮ ವಹಿಸಿದ ಹಿರಿಯ ಚೇತನ... ಸದಾ ಲವಲವಿಕೆಯಿಂದ ಕಾರ್ಯನಿರ್ವಹಿಸುವ ರೀತಿ ಮತ್ತು ಸೌಜನ್ಯದ ನಡೆನುಡಿಯಿಂದ ಎಲ್ಲರೊಂದಿಗೆ ಒಂದಾಗಿ ಬೆರೆಯುವ ವಿಶೇಷ ಗುಣ ಚಿರಸ್ಮರಣೀಯ. ಶ್ರೀ ರಾಮ ರಾವ್ ಅವರ ಅಗಲಿಕೆಯ ನೋವನ್ನು ಪದಗಳಲ್ಲಿ ಹೇಳುವುದು ಕಷ್ಟ. ಆದರೆ ವಿಧಿಗೆ ನಾವು ತಲೆ ಬಾಗಲೇಬೇಕು.

ನಮ್ಮ ಸಂಘದ ನಂದಾದೀಪವಾದ.... ಗೌರವಾನ್ವಿತ ರಾಮ ರಾವ್ ಇವರ ವದನವು ಬಾಡಿ ಬರಿದಾಗಿದೆ... ಆತ್ಮವು ಹರಿಪಾದ ಸೇರಿದೆ... ಇನ್ನು ಮಾಣಿಕ್ಯ ನೆನಪು ಮಾತ್ರ... ಅವರ ಆದರ್ಶದ ಸ್ಥಿರವಾದ ಕಾರ್ಯಗಳು ಮಾತ್ರ... ಅಗಲಿದ ಅವರ ದಿವ್ಯಾತ್ಮಕ್ಕೆ ಚಿರಶಾಂತಿ ದೊರೆಯಲಿ. ಈ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

**ಸದಸ್ಯರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ**

## ಔಷಧ ಕಾಲ



ಆಯುರ್ವೇದ ಶಾಸ್ತ್ರದಲ್ಲಿ ಔಷಧ ಸೇವನೆಗೆ ಬಹಳ ಮಹತ್ವ ನೀಡುತ್ತಿದ್ದರು. ನಾವು ಈಗಿನ ಕಾಲದಲ್ಲಿ Before Food ಅಥವಾ After Food ಹೀಗೆ 2 ಸಮಯಗಳಲ್ಲಿ ಮಾತ್ರ ಔಷಧ ಸೇವನೆಯನ್ನು ಅನುಸರಿಸುತ್ತೇವೆ. ಆಯುರ್ವೇದವು ಔಷಧ ಸೇವನೆಯನ್ನು ಆಯಾ ರೋಗಗಳಿಗೆ ಅನುಸಾರವಾಗಿ, ರೋಗಿಯ ಬಲ, ದೋಷಗಳ ಬಲ, ರೋಗಿಯ ಜೀರ್ಣಶಕ್ತಿ, ದೇಹ, ಕಾಲ, ಔಷಧ ವಿಧ ಹಾಗೂ ಯಾವ ಮಾರ್ಗದಲ್ಲಿ ಔಷಧ ದೇಹಕ್ಕೆ ಕೊಡುತ್ತೇವೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಆಚಾರ್ಯ ವಾಗ್ಭಟರು ಈ ಕೆಳಗಿನ ಔಷಧ ಕಾಲಗಳನ್ನು ವಿಸ್ತಾರವಾಗಿ ಹೇಳಿರುತ್ತಾರೆ.

1. **ಅಭಕ್ತ (अभक्त)** : ಔಷಧವನ್ನು ಖಾಲಿ ಹೊಟ್ಟೆಯಲ್ಲಿ ಯಾವುದೇ ಆಹಾರವಿಲ್ಲದೆ ಸೇವಿಸುವುದು. ಇದು ಔಷಧದ ತೀವ್ರತೆಯನ್ನು ಹೆಚ್ಚಿಸುತ್ತದೆ. ದೇಹಕ್ಕೆ ಬೇಗನೆ ಸೇರಿಕೊಳ್ಳುತ್ತದೆ. ಜಠರ ರೋಗಗಳಿಗೆ, ಬಲವಾನ್ ರೋಗಿಗಳಲ್ಲಿ ಉಪಯುಕ್ತ.
2. **ಪ್ರಾಗ್‌ಭಕ್ತ (प्रागभक्त)** : ಔಷಧವನ್ನು ಖಾಲಿ ಹೊಟ್ಟೆಗೆ ಆಹಾರ ಸೇವಿಸುವ ಸ್ವಲ್ಪ ಮೊದಲು ಕೊಡುವುದು, ನಂತರ ಆಹಾರ ಸೇವಿಸುವುದು. ಇದು ಜಠರ ಕರುಳಿನ ರೋಗ, ದೇಹದ ಕೆಳಭಾಗದ ರೋಗಗಳಿಗೆ, ಸ್ಥೂಲ ರೋಗಿಗಳಿಗೆ ಉಪಯುಕ್ತ.
3. **ಮಧ್ಯಭಕ್ತ (मध्य भक्त)** : ಔಷಧವನ್ನು ಆಹಾರದ ಮಧ್ಯದ ಭಾಗದಲ್ಲಿ ನೀಡಲಾಗುತ್ತದೆ. (Intra Meal) ಇದು ಪಿತ್ತದ ರೋಗ. ಜಠರ ಕರುಳಿನ ರೋಗಗಳಿಗೆ ಉತ್ತಮ.
4. **ಅಧೋಭಕ್ತ (अधो भक्त)** : ಇಲ್ಲಿ ಆಹಾರ ಸೇವಿಸಿದ ಕೂಡಲೇ ಔಷಧವನ್ನು ನೀಡುವುದು. ಇದು ಹೃದಯ, ಕಫಜ ವ್ಯಾಧಿಗಳಲ್ಲಿ ದೇಹಪುಷ್ಠಿಗೆ, ಶಿರರೋಗಗಳಲ್ಲಿ ಉತ್ತಮ.
5. **ಸಭಕ್ತ (सभक्त)** : ಆಹಾರದೊಂದಿಗೆ ಔಷಧವನ್ನು ಬೆರೆಸಿ ನೀಡುವುದು. ಇದು ಮಕ್ಕಳಲ್ಲಿ, ಅಲ್ಪ ದೇಹ ಬಲವುಳ್ಳವರಲ್ಲಿ, ಗರ್ಭಿಣಿಯರಲ್ಲಿ ಔಷಧ ದ್ವೇಷಿಗಳಿಗೆ ಉತ್ತಮ.

6) **ಅಂತರಾಭಕ್ತ (अन्तरा भक्त)** : ಇಲ್ಲಿ ಔಷಧವನ್ನು ಎರಡು ಆಹಾರಗಳ ಮಧ್ಯೆ (Between 2 Meals) ಮೊದಲ ಆಹಾರ ಜೀರ್ಣವಾದ ನಂತರ ಔಷಧ ಸೇವಿಸಿ, ಅದು ಜೀರ್ಣಿಸಿದ ನಂತರ ಎರಡನೇ ಆಹಾರ ಸೇವಿಸುವುದು. ಇದು ಉತ್ತಮ ಜೀರ್ಣಕ್ರಿಯೆ ಹೊಂದಿದವರಲ್ಲಿ ಹಾಗೂ ಹೃದಯ, ಶ್ವಾಸಕೋಶ, ವಾತ ರೋಗಗಳಲ್ಲಿ ಉಪಯುಕ್ತ.

7) **ಸಾಮುದ್ಗ (सामुद्ग)** : ಔಷಧವನ್ನು ಆಹಾರದ ಸ್ವಲ್ಪ ಮೊದಲು ಮತ್ತು ಆಹಾರ ಸೇವನೆಯ ನಂತರ ಎರಡು ಬಾರಿ ಕೊಡುವುದು. ಇದು ಹಿಕ್ಕಾ ರೋಗ, ಕಂಪವಾತ, ಮೂರ್ಛೆರೋಗ ಹಾಗೂ ಮೆದುಳಿನ ರೋಗಗಳಲ್ಲಿ ಉಪಕಾರಿ.

8) **ಮುಹುರ್ ಮುಹು (मुहुर मुहु)** : ಇಲ್ಲಿ ಆಹಾರ ಇಲ್ಲದೆ ಅಥವಾ ಜೊತೆಗೆ ಔಷಧವನ್ನು ಆಗಾಗ್ಗೆ ಕೊಡುವುದು. ಇದು ಕೆಮ್ಮು, ದಮ್ಮು, ವಾಂತಿ, ವಿಷ ರೋಗಗಳಲ್ಲಿ ಉಪಯುಕ್ತ

9) **ಸಗ್ರಾಸ (सग्रास)** : ಔಷಧವನ್ನು ಆಹಾರದ ಮೊದಲ ತುತ್ತಿನ ಜೊತೆಗೆ ಸೇವಿಸುವುದು. ಇದು ಮಕ್ಕಳಲ್ಲಿ, ಅಲ್ಪ ಬಲ ರೋಗಿಗಳಲ್ಲಿ, ಮಂದಾಗ್ನಿ ರೋಗಿಗಳಲ್ಲಿ ಪರಿಣಾಮಕಾರಿ

10) **ಗ್ರಾಸಾಂತರ (ग्रासान्तर)** : ಔಷಧವನ್ನು ಆಹಾರದ ಎರಡು ತುತ್ತಿನ (ಗ್ರಾಸ) ಮಧ್ಯೆ ಸೇವಿಸುವುದು. ಇದು ಶ್ವಾಸ, ಹೃದ್ರೋಗ, ಮೆದುಳಿನ ರೋಗಗಳಲ್ಲಿ ಉಪಯುಕ್ತ.

11) **ರಾತ್ರಿಭಕ್ತ (रात्रिभक्त)** : ಇಲ್ಲಿ ಔಷಧವನ್ನು ರಾತ್ರಿ ಆಹಾರದ ನಂತರ ಸೇವಿಸುವುದು. ಇದು ಕಣ್ಣು, ಕಿವಿ, ಮೂಗು, ಗಂಟಲಿನ ರೋಗಗಳಿಗೆ ಉತ್ತಮ.

– **ಡಾ। ಬಿ. ಯಚ್. ಸಂದೀಪ್ ರಾವ್,** ಆಯುರ್ವೇದ ವೈದ್ಯರು, ಮುಲ್ಕಿ

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀಮತಿ ಆಶಾ ಮತ್ತು ಶ್ರೀ ಅರವಿಂದ್ ಕುಮಾರ್ ಯು. ಇವರ ಸುಪುತ್ರಿ **ಚಿ| ಸೌ| ಅನುಶ್ರೀ**ಯವರ ವಿವಾಹವು ಶ್ರೀಮತಿ ಗಾಯತ್ರಿ ಮತ್ತು ಮಡಿಯಾಳ ಶ್ರೀ ಬಾಲಕೃಷ್ಣ ರಾವ್‌ರವರ ಸುಪುತ್ರ **ಚಿ| ಅತುಲ್ ರಾವ್** ಇವರೊಂದಿಗೆ ತಾ. 20-05-2022ನೇ ಶುಕ್ರವಾರ ಉಡುಪಿಯ ಶಾರದಾ ಮಂಟಪದಲ್ಲಿ ನೆರವೇರಿತು.


❖ ❖ ❖

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಕೆಳಗಿನ ಕೇದಿಗೆ ಚಂದ್ರಶೇಖರ್‌ರವರ ಸುಪುತ್ರ **ಚಿ| ಅಭಿನಂದನ್ ರಾವ್** ಇವರ ವಿವಾಹವು ಶ್ರೀ ಪ್ರಸಾದ್ ಮತ್ತು ಶ್ರೀಮತಿ ಕಾಂತಿಮಣಿ ಇವರ ಸುಪುತ್ರಿ **ಚಿ| ಸೌ| ಯೋಗಶ್ರೀ** ಇವರೊಂದಿಗೆ ತಾ. 18-05-2022ನೇ ಬುಧವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.

❖ ❖ ❖

ಮಂಗಳೂರಿನ ಶ್ರೀಮತಿ ಮಮತ ಮತ್ತು ಶ್ರೀ ಗುರುಪ್ರಸಾದ್‌ರವರ ಸುಪುತ್ರ **ಚಿ| ಹರ್ಷದ್** ಇವರ ವಿವಾಹವು ಧಾರವಾಡದ ಶ್ರೀ ಮಾಧವ ರಾವ್ ಮತ್ತು ಶ್ರೀಮತಿ ಸುಧಾಮಣಿ ಇವರ ಸುಪುತ್ರಿ **ಚಿ| ಸೌ| ಅಪೇಕ್ಷಾ** ಇವರೊಂದಿಗೆ ತಾ. 6-06-2022ನೇ ಸೋಮವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಪಡುಬಿದ್ರೆ ಚಂದ್ರಹಾಸ ಶರ್ಮಾ** (63) ತಾ. 3-05-2022ನೇ ಮಂಗಳವಾರ ಉಡುಪಿಯಲ್ಲಿ ನಿಧನ ಹೊಂದಿದರು. ಅವರು ತಾಯಿ, ಪತ್ನಿ, ಓರ್ವ ಮಗ ಹಾಗೂ ಓರ್ವ ಮಗಳು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

●●●



**ಬೆಲ್ಮನ್ ಜಯರಾಜ್ ರಾವ್** (52) ತಾ. 25-05-2022ನೇ ಬುಧವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

●●●



ದಿ| ನಾರಾಯಣ ಉಬರಳೆಯವರ ಪತ್ನಿ **ಶ್ರೀಮತಿ ಯಶೋದ (89)** ತಾ. 29-05-2022ನೇ ರವಿವಾರ ಉಬರಳೆಯಲ್ಲಿ ನಿಧನ ಹೊಂದಿದರು. ಇವರು ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.


ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**





ಪತ್ರಿಕೆಗೆ ಶುಭ ಬಯಸುವ-

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**



ಪತ್ರಿಕೆಗೆ ಶುಭ ಬಯಸುವ-
ಮೊಬೈಲ್ : 9972989678
9448104174
**ರವಿಕಿರಣ್ ಕೈೂಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
**2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ**
**ಪುತ್ತೂರು ತಾಲೂಕು, ದ. ಕ., 574 241**


## ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕಾರ



ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ವಿದ್ಯಾಸಂಸ್ಥೆ ವಿವೇಕಾನಂದ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾಗಿ **ಶ್ರೀ ಚಂದ್ರಕುಮಾರ ಬಾರ್ಕೂರು** ಇವರು ಅಧಿಕಾರ ಸ್ವೀಕಾರ ಮಾಡಿದರು. ಶ್ರೀಯುತರು ಬಾರಕೂರು ಮಸ್ಕೆಬೈಲು ದಿ| ಶಾರದಮ್ಮ ಮತ್ತು ದಿ| ಲಕ್ಷ್ಮೀನಾರಾಯಣಯ್ಯನವರ ಸುಪುತ್ರರಾಗಿದ್ದು, ಬಾರಕೂರಿನ ಹೇರಾಡಿ, ಹನೆಹಳ್ಳಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ನ್ಯಾಶನಲ್ ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ. ವಿದ್ಯಾಭ್ಯಾಸ, ಉಜಿರೆಯ ಎಸ್.ಡಿ.ಎಮ್. ಕಾಲೇಜಿನಲ್ಲಿ ಪದವಿ ಮುಗಿಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಸಾಯನ ಶಾಸ್ತ್ರ ಸ್ನಾತಕೋತ್ತರ ಪದವಿಯನ್ನು ಪಡೆದು, ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ವೃತ್ತಿಯನ್ನು ಪ್ರಾರಂಭಿಸಿದರು. ಅನಂತರ ವಿವೇಕಾನಂದ ಪಾಲಿಟೆಕ್ನಿಕ್‌ನಲ್ಲಿ ಉಪನ್ಯಾಸಕರಾಗಿ, ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಇದೀಗ ಸಂಸ್ಥೆಯ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಉತ್ತಮ ಕ್ರೀಡಾಪಟುವೂ, ಹವ್ಯಾಸಿ ಯಕ್ಷಗಾನ ಕಲಾವಿದರೂ ಆದ ಇವರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರೌಢಿಮೆಯನ್ನು ಮೆರೆದಿದ್ದಾರೆ.

## ಅಪಾರ ಕೀರ್ತಿ ಗಳಿಸಿ



ಕಲಿಕೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ನಮ್ಮ ಸಮಾಜದ ಹೆಮ್ಮೆಯ ಸುಪುತ್ರಿ **ಕುಮಾರಿ ಶ್ರೀಜಾ** 10ನೇ ತರಗತಿಯಲ್ಲಿ 625 ಅಂಕಗಳಲ್ಲಿ 625 ಅಂಕ ಪಡೆದಿದ್ದಾಳೆ. ಈಕೆ ಮೂಡಬಿದ್ರೆ ರೋಟರಿ ಆಂಗ್ಲ ಮಾಧ್ಯಮ ಸ್ಕೂಲ್‌ನ ವಿದ್ಯಾರ್ಥಿನಿ. ಸ್ವಸ್ತಿಕ್ ಗ್ರಾಫಿಕ್ಸ್‌ನ ಶ್ರೀಮತಿ ಶುಭ ಮತ್ತು ಶ್ರೀ ರಾಘವೇಂದ್ರ ಹೆಬ್ಬಾರ್ ಅವರ ಸುಪುತ್ರಿ.

## ಭವತೀ ಭಿಕ್ಷಾಂ ದೇಹಿ..



ಶ್ರೀ ಮಧುಸೂದನ ರಾವ್ ಮತ್ತು ಶ್ರೀಮತಿ ರೂಪಶ್ರೀ ಇವರ ಸುಪುತ್ರ **ಚಿ| ಅರವಿಂದ** ಇವನ ಬ್ರಹ್ಮೋಪದೇಶವು ತಾರೀಕು 25-05-2022ನೇ ಬುಧವಾರ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

* * *

ತೋಟಾಲು ಶ್ರೀ ಮುರಳೀಧರ ಮತ್ತು ಶ್ರೀಮತಿ ಅಮಿತಾರವರ ಸುಪುತ್ರ **ಚಿ| ಪ್ರಥಮ್**‌ನ ಉಪನಯನವು ತಾರೀಕು 20-05-2022ನೇ ಶುಕ್ರವಾರ ಪುತ್ತೂರಿನ ತೆಂಕಿಲದ 'ಸ್ವಾಮಿ ಕಲಾಮಂದಿರ'ದಲ್ಲಿ ನೆರವೇರಿತು.

* * *

ಪೆರ್ಡೂರು ಶ್ರೀ ಗಣೇಶ್ ರಾವ್ ಮತ್ತು ಶ್ರೀಮತಿ ಸಂಧ್ಯಾರವರ ಸುಪುತ್ರ **ಚಿ| ಪ್ರಖ್ಯಾತ್**‌ನ ಬ್ರಹ್ಮೋಪದೇಶವು ತಾರೀಕು 13-05-2022ನೇ ಶುಕ್ರವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.


**PRAVEEN KUMAR ADYAPADY**
**NOTARY & ADVOCATE**
**MANGALORE OFFICE**
JANVI PLAZA, IInd FLOOR
BUNTS HOSTEL, MANGALORE
**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
**We undertakes : Civil, Criminal, Motor Vehicles, A.C., D.C. Cases, Land Conversion, Registration etc.**



**PREETHIKA AUTOMOBILES**
✆ 2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ – ವಿಟ್ಲದ ವತಿಯಿಂದ ಶ್ರೀ ಶಂಕರ ಭಗವತ್ಪಾದರ ಜಯಂತಿ



ತಾರೀಕು 9–05–2022ನೇ ಸೋಮವಾರ ಶ್ರೀಯುತ ಶಿವರಾಮ ರಾವ್ ನೆಟ್ಲ ಇವರ 'ಸತ್ಯದೇವತಾ ಅನುಗ್ರಹ ಮನೆ, ಬಲ್ಲೆಕೋಡಿ, ಕಲ್ಲಡ್ಕ' ದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದರ ಜಯಂತಿಯನ್ನು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ– ವಿಟ್ಲದ ವತಿಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದರ ಕುರಿತಾದ ಪ್ರವಚನ ಹಾಗೂ ಶಂಕರಸ್ಮರಣೆ ಕಾರ್ಯಕ್ರಮವನ್ನು ಶ್ರೀಯುತ ಕೆಯ್ಯೂರು ನಾರಾಯಣ ಭಟ್‌ರವರು, ಭಗವತ್ಪಾದರ ಸಂದೇಶವನ್ನು ಸಮಾಜಕ್ಕೆ ಪ್ರಚುರಪಡಿಸುವ ನಿಟ್ಟಿನಲ್ಲಿ ಪ್ರವಚನವನ್ನು ನೀಡಿದರು. ದೀಪ ಪ್ರಜ್ವಲನೆಯನ್ನು ಮನೆಯೊಡತಿ ಶ್ರೀಮತಿ ಅರುಣಾ ಶಿವರಾಮರೊಂದಿಗೆ ಸುಮಂಗಲಿಯರು ನೆರವೇರಿಸಿದರು. ಶ್ರೀಮತಿ ಸ್ವಾತಿ ರಂಜಿತ್ ಇವರು ಪ್ರಾರ್ಥನೆ ಹಾಡಿದರು. ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರೂ ಆದ ಶ್ರೀಯುತ ಕೃಷ್ಣ ಶರ್ಮ ಅನಾರು ವಹಿಸಿದ್ದರು. ಕಾರ್ಯದರ್ಶಿ ಶ್ರೀಯುತ ಶ್ರೀಧರ ರಾವ್ ನೆಟ್ಲ ಸ್ವಾಗತಿಸಿದರು ಹಾಗೂ ಧನ್ಯವಾದವನ್ನು ಶ್ರೀಯುತ ಭವಾನಿ ಶಂಕರರಾಯರು ನಿರ್ವಹಿಸಿದರು. ಶ್ರೀಯುತ ಸಂತೋಷ ಕಾವಳಕಟ್ಟೆ ಕಾರ್ಯಕ್ರಮ ಸಂಯೋಜಿಸಿದರು.

## 'ಶಾರದೇ ಪಾಹಿಮಾಂ' – 'ಶಂಕರಾ ರಕ್ಷಮಾಂ'



ದಿನಾಂಕ 15–05–2022ನೇ ರವಿವಾರ ಸಾಯಂಕಾಲ ಜಯರಾಮ ರಾಯರ ಮನೆಯಲ್ಲಿ 'ಶ್ರೀ ಶಂಕರ ಜಯಂತಿ'ಯ ಆಚರಣೆಯ ಸಂದರ್ಭದಲ್ಲಿ ಶ್ರೀ ಆದಿ ಶಂಕರ ಮಹಿಳಾ ಭಜನಾ ಮಂಡಳಿಯ ಸದಸ್ಯರಿಂದ 'ಭಜನೆ' ಹಾಗೂ 'ಶ್ರೀ ಶಂಕರ ತತ್ವದ ಮಹತ್ವ'ದ ಬಗ್ಗೆ ಮುಖ್ಯ ಅಭ್ಯಾಗತರಾದ ಪತ್ರಕರ್ತರು ಹಾಗೂ ಹಿಂದಿ ಪ್ರಾಚಾರ್ಯರಾದ ಶ್ರೀ ರಾಯಿ ರಾಜಕುಮಾರ ಇವರಿಂದ ಉಪನ್ಯಾಸ, ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಮತ್ತು ಅಧ್ಯಕ್ಷರಾದ ಎಂ. ದೇವಾನಂದ ಭಟ್ ಬೆಳುವಾಯಿ ಶ್ರೀ ಶಂಕರಾಚಾರ್ಯರನ್ನು ನೆನಪಿಸುವ ಮೂಲಕ ಅವರ ತತ್ವಗಳನ್ನು ಅನುಸರಿಸಬೇಕೆಂದು ತಿಳಿಸಿದರು.

ಬೊಕ್ಕಸ ಜಯರಾಮ ರಾವ್ ಸ್ವಾಗತಿಸಿ, ಕುಮಾರಿ ಮೇಘನಾ ರಾವ್‌ರವರಿಂದ ಪ್ರಾರ್ಥನೆ, ಬೊಕ್ಕಸ ಸುರೇಶ ರಾವ್ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಬೋಜರಾವ್ ಶಿರ್ತಾಡಿ ಧನ್ಯವಾದ ಸಮರ್ಪಣೆ ಮಾಡಿದರು ಹಾಗೂ ರಾಯಿ ರಜತ್ ಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಿದರು.

## ಬ್ರಹ್ಮಕಲಶೋತ್ಸವದ ದಿನ ಮತ್ತು ಶ್ರೀ ಶಂಕರ ಜಯಂತಿ ಉತ್ಸವ ಆಚರಣೆ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ ಮತ್ತು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿಯವರ ಸಹಯೋಗದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಬ್ರಹ್ಮಕಲಶೋತ್ಸವದ ದಿನ ಮತ್ತು ಶ್ರೀ ಶಂಕರ ಜಯಂತಿ ಉತ್ಸವವನ್ನು ಆಚರಿಸಲಾಯಿತು. ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಲ್ಲಿ ಶ್ರೀಯುತ ಹೆಜಮಾಡಿ ಕೃಷ್ಣರಾಜ ಭಟ್ ಇವರು ಶ್ರೀ ದೇವರಿಗೆ ಪವಮಾನ ಕಲಶಾಭಿಷೇಕವನ್ನು ನೆರವೇರಿಸಿದರು. ಬಳಿಕ ಸಂಘದ ಸದಸ್ಯೆಯರಿಂದ ಶಂಕರ ಅಷ್ಟೋತ್ತರ ಪಾರಾಯಣ ಮತ್ತು ಭಜನೆಯು ನಡೆಯಿತು. ಮಂಗಳಾರತಿಯ ಬಳಿಕ ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತರ ಮತ್ತು ಅರ್ಚಕರ ಪರಿಪಾಲನಾ ಸಮಿತಿ, ಮಂಗಳೂರು ಇದರ ಅಧ್ಯಕ್ಷರಾದ ಶ್ರೀಯುತ ಗುರುಪ್ರಸಾದ್ ಹೆಬ್ಬಾರ್, ಕಬ್ಬಿನಾಲೆ ಇವರು ಶಂಕರಾಚಾರ್ಯರ ತತ್ವಗಳ ಬಗ್ಗೆ, ಬ್ರಾಹ್ಮಣರ ಸಂಸ್ಕಾರ, ಸಂಪ್ರದಾಯಗಳ ಬಗ್ಗೆ ತಿಳಿಸಿ, ಇದನ್ನು ಉಳಿಸಲು ಮಾತೆಯರು ಮಾಡಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು. ಬಳಿಕ ಶ್ರೀಯುತ ಗುರುಪ್ರಸಾದ್ ಹೆಬ್ಬಾರ್‌ರವರಿಗೆ ವಿದ್ವತ್ ಸನ್ಮಾನವು ನಡೆಯಿತು. ಈ ಕಾರ್ಯಕ್ರಮದಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ. ಬಿ. ವಾಸುದೇವ ರಾವ್, ಅಧ್ಯಕ್ಷರಾದ ಶ್ರೀ ಮೋಹನ್ ರಾವ್, ಶ್ರೀ ಬಾಲಗಣಪತಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಪಿ. ಡಿ. ಶೇಖರ್ ರಾವ್ ಮತ್ತು ಸಂಘದ ನಿರ್ದೇಶಕರು ಉಪಸ್ಥಿತರಿದ್ದರು. ಬಳಿಕ ಅನ್ನಸಂತರ್ಪಣೆಯು ನಡೆಯಿತು.

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

# ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ – ಡೆವಲಪರ್ಸ್‌ನ ನೂತನ ವಾಣಿಜ್ಯ ಸಂಕೀರ್ಣ ಮಂಗಳೂರಿನಲ್ಲಿ 'ಅನಂತೇಶ್' ಉದ್ಘಾಟನೆ




ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆ ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ನೂತನ ವಾಣಿಜ್ಯ ಸಂಕೀರ್ಣ 'ಅನಂತೇಶ್' ಮಂಗಳೂರಿನ ರಥಬೀದಿಯಲ್ಲಿ ರವಿವಾರ ಉದ್ಘಾಟನೆಗೊಂಡಿತು.

ಲ್ಯಾಂಡ್ ಟ್ರೇಡ್ಸ್ ಸಂಸ್ಥೆಯಿಂದ ವಿನೂತನ ಶೈಲಿಯ ಕಟ್ಟಡ ನಿರ್ಮಾಣ ಮಂಗಳೂರಿನ ಸೌಂದರ್ಯವನ್ನು ಹೆಚ್ಚಿಸಿದೆ. ಕಳೆದ 30 ವರ್ಷದಲ್ಲಿ 40ಕ್ಕೂ ಅಧಿಕ ವಸತಿ ಸಮುಚ್ಚಯಗಳನ್ನು ನೀಡಿದ ಕೀರ್ತಿ ಲ್ಯಾಂಡ್ ಟ್ರೇಡ್ಸ್‌ಗೆ ಸಲ್ಲುತ್ತದೆ. ಬೆಳೆಯುತ್ತಿರುವ ಮಂಗಳೂರಿನಲ್ಲಿ ಸ್ವಂತ ಸೂರು ಹೊಂದುವ ಕನಸು ಅನೇಕರದ್ದು. ಅದಕ್ಕೆ ಪೂರಕವಾದ ಗುಣಮಟ್ಟದ ವಸತಿ ಸಮುಚ್ಚಯಗಳನ್ನು ನಿರ್ಮಿಸುವಲ್ಲಿ ಲ್ಯಾಂಡ್ ಟ್ರೇಡ್ಸ್ ಮುಂಚೂಣಿಯಲ್ಲಿದೆ. ಅನೇಕರಿಗೆ ಉದ್ಯೋಗ ನೀಡಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ ಎಂದು ನೂತನ ವಾಣಿಜ್ಯ ಸಂಕೀರ್ಣ ಉದ್ಘಾಟಿಸಿದ ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ನಗರದಲ್ಲಿ ವಸತಿ ಸಮುಚ್ಚಯ ನಿರ್ಮಾಣ ನಿಯಮಗಳನ್ನು ಸಡಿಲಿಸುವ ಚಿಂತನೆ ಇದೆ. ನಗರಕ್ಕೆ ಸುಸಜ್ಜಿತ ಮಾಸ್ಟರ್ ಪ್ಲಾನ್ ತಯಾರಿಸುವ ಕೆಲಸ ಸಾಗುತ್ತಿದೆ. ನಗರದಲ್ಲಿ ಹಸುರೀಕರಣಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಗ್ರೀನ್ ಮಂಗಳೂರು ಅನುಷ್ಠಾನಗೊಳಿಸಲಾಗುತ್ತಿದೆ. 2024–25ರಲ್ಲಿ ಮಂಗಳೂರಿನ ಚಿತ್ರಣ ಸಂಪೂರ್ಣ ಬದಲಾಗಲಿದೆ. ರಥಬೀದಿ ದೇವಾಲಯಗಳ ಹೆಗ್ಗುರುತು. ಈ ಪ್ರದೇಶಕ್ಕೆ ಹೊಂದಿಕೊಂಡಂತೆ 'ಅನಂತೇಶ್' ವಾಣಿಜ್ಯ ಸಂಕೀರ್ಣ ನಿರ್ಮಾಣವಾಗಿದೆ. ನಗರದ ಅಭಿವೃದ್ಧಿಯ ದೃಷ್ಟಿಯಲ್ಲಿ ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೆ. ಶ್ರೀನಾಥ್ ಹೆಬ್ಬಾರ್ ಕೊಡುಗೆ ಅಪಾರ ಎಂದರು. ಮಂಗಳೂರು ನಗರದ ಅಭಿವೃದ್ಧಿಗೆ ರಿಯಲ್ ಎಸ್ಟೇಟ್ ಉದ್ಯಮಿಗಳ ಪರಿಶ್ರಮ, ಕೊಡುಗೆ ಬಹಳಷ್ಟಿದೆ ಎಂದು ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಹೇಳಿದರು.

ಗುಣಮಟ್ಟದ ವಸತಿ ಸಮುಚ್ಚಯ, ವಾಣಿಜ್ಯ ಸಂಕೀರ್ಣ ನಿರ್ಮಾಣದ ಮೂಲಕ ಶ್ರೀನಾಥ್ ಹೆಬ್ಬಾರ್ ನಗರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೇಯರ್ ಪ್ರೇಮಾನಂದ ಶೆಟ್ಟಿ ವಿವರಿಸಿದರು.

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ರವಿಶಂಕರ ಮಿಜಾರ್, ಆರೆಸ್ಸೆಸ್ ಮುಖಂಡ ಶ್ರೀ ಪ್ರಕಾಶ್ ಪಿ. ಎಸ್. ಶುಭ ಹಾರೈಸಿದರು.

ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದ ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೆ. ಶ್ರೀನಾಥ್ ಹೆಬ್ಬಾರ್, ನೆಲ ಮತ್ತು ನಾಲ್ಕು ಅಂತಸ್ತಿನ ಈ ಅತ್ಯಾಧುನಿಕ ಕಟ್ಟಡವು ನೆಲಮಾಳಿಗೆಯ ಪಾರ್ಕಿಂಗ್, ಎರಡು ಸ್ವಯಂಚಾಲಿತ ಲಿಫ್ಟ್‌ಗಳು, ಬ್ಯಾಕಪ್ ಪವರ್ ಜನರೇಟರ್‌ನಂತಹ ಸೌಲಭ್ಯಗಳನ್ನು ಹೊಂದಿದೆ. ನೀರಿನ ಸಂರಕ್ಷಣೆಗಾಗಿ ಮಳೆನೀರು ಕೊಯ್ಲು ಅಳವಡಿಸಲಾಗಿದೆ. ಭದ್ರತೆ ಮತ್ತು ಸುರಕ್ಷೆಗಾಗಿ ಸಿಸಿಟಿವಿ ಮತ್ತು ಅಗ್ನಿಶಾಮಕ ಸೌಲಭ್ಯಗಳನ್ನು ಹೊಂದಿದೆ. ಕಟ್ಟಡ ನಿರ್ಮಾಣದಲ್ಲಿ ಅತ್ಯುತ್ತಮ ಸಾಮಗ್ರಿಗಳನ್ನು ಬಳಸಲಾಗಿದೆ. ಮಂಗಳೂರಿನ ಆರ್ಕಿಟೆಕ್ಟ್ಸ್ ಸಂಸ್ಥೆಯ ವಾಸ್ತುಶಿಲ್ಪಿ ಪೀಟರ್ ಮಸ್ಕರೇನ್ಹಸ್ ವಿನ್ಯಾಸಗೊಳಿಸಿದ್ದಾರೆ. ನಿರ್ಮಾಣ ಕಾರ್ಯವನ್ನು ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಎಮ್‌ಫಾರ್ ಕನ್‌ಸ್ಟ್ರಕ್ಷನ್ಸ್ ನಿರ್ವಹಿಸಿದೆ. ನಿರ್ಮಾಣದ ಗುಣಮಟ್ಟವನ್ನು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ಸ್ ಸಂಸ್ಥೆ ಗೋಕುಲರಾಜ್ ಅಸೋಸಿಯೇಟ್ಸ್ ನಿರ್ವಹಿಸಿದ್ದಾರೆ ಎಂದು ವಿವರಿಸಿದರು.

ಸಂಸ್ಥೆಯ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು. ಹಿರಿಯ ಪತ್ರಕರ್ತ ಮನೋಹರ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು. ಆಡಳಿತ ವಿಭಾಗದ ನಾಗರಾಜ್ ವಂದಿಸಿದರು.


Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**
**K. S. Rao Road, MANGALORE - 575 003**

*Authorised Dealers for :*

**Vijai Super GP 150 &**
**Vikram 3 Wheelers (Petrol & Diesel)**



*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

**"Vijaya Nivas", Opp. Pio Mall**
**Bejai Church Road, Mangalore - 4**



Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3

CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್
ಕೂಳೂರು, ಮಂಗಳೂರು - 575 013

Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**

**Opp. to D. P. Stores Main Road, B. C. Road, Bantwal Tq.**

*Dealers in : 2 & 3 WHEELERS SPARES*



**Sharekhan**
Your guide to the financial jungle

EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT

Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028



**ಶ್ರೀ ಕಾಮಾಕ್ಷೀ ಶಾರದಾ ಪೀಠಮ್ ಘನಪುರೀ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ**

**ಮಹಾಮೇರು ಶ್ರೀಚಕ್ರ ದೇವಾಲಯ, ಹೆಬ್ಬೂರು, ತುಮಕೂರು ಜಿಲ್ಲೆ - 572 120 ✆ : 0816 - 2241032**

# ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು, ಪೀಠಾಧಿಪತಿಗಳು ಇವರ ಸಂಕ್ಷಿಪ್ತ ಪರಿಚಯ



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪುತ್ತೂರಿನಲ್ಲಿ ಅರ್ಬಿ ಎಂಬ ಸ್ಥಳದಲ್ಲಿ ಕುರಯ ನಾರಾಯಣಾಚಾರ್ಯರೆಂಬ ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರಸಿದ್ಧ ಪುರೋಹಿತರಿದ್ದರು. ಇವರು ಸುಮಾರು ಐವತ್ತು ಪುರೋಹಿತರನ್ನು ತಯಾರು ಮಾಡಿದ್ದರು. ಇವರು ಪಾವಂಜೆ ಮೊದಲಾದ ಅನೇಕ ದೇವಸ್ಥಾನಗಳಲ್ಲಿ ದೇವತಾ ಪ್ರತಿಷ್ಠೆಗಳನ್ನೂ, ಬ್ರಹ್ಮಕಲಶಗಳನ್ನೂ ನೆರವೇರಿಸಿದ್ದರು. ಇವರ ಪ್ರಥಮ ಪುತ್ರ ಕುರಯ ರಾಮಕೃಷ್ಣ ಶಾಸ್ತ್ರಿಗಳು ಪ್ರಸಿದ್ಧ ಪುರೋಹಿತರಾಗಿದ್ದರು. ಇವರ ಚತುರ್ಥ ಪುತ್ರರೇ ಕುರಯ ಆತ್ಮಾರಾಮ ಶಾಸ್ತ್ರಿಗಳು (21–07–1933ರಲ್ಲಿ ಇವರ ಜನನ) ಇವರು ತಮ್ಮ ಹದಿಮೂರನೆಯ ವಯಸ್ಸಿನಿಂದ ಇಪ್ಪತ್ತಮೂರನೆಯ ವಯಸ್ಸಿನವರೆಗೆ ತಮ್ಮ ತಂದೆಯವರಿಂದ ಪೌರೋಹಿತ್ಯವನ್ನು ಅಭ್ಯಾಸ ಮಾಡಿದರು. ಇದರ ಜೊತೆಯಲ್ಲಿ ಪುತ್ತೂರಿನಲ್ಲಿದ್ದ ಪಂಡಿತಶ್ರೇಷ್ಠ ಶಂಭು ಶರ್ಮರಲ್ಲಿ ಸಂಸ್ಕೃತವನ್ನು ಕಲಿತು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಉಡುಪಿಯ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಶಿರೋಮಣಿಗಾಗಿ ಅಧ್ಯಯನ ಮಾಡಿ 1960ರಲ್ಲಿ ಉತ್ತೀರ್ಣರಾದರು. ಮುಂದೆ ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ ವಾಚಸ್ಪತಿ ಉಪಾಧಿಗಾಗಿ ಪ್ರವೇಶವನ್ನು ಪಡೆದು ಕೇಂದ್ರ ಸರಕಾರದ ವಿದ್ಯಾರ್ಥಿವೇತನದೊಂದಿಗೆ ಮೂರು ವರ್ಷ ಸಂಶೋಧನೆ ನಡೆಸಿ 'ಸಾಹಿತ್ಯಶಾಸ್ತ್ರೇ ಅನ್ಯಶಾಸ್ತ್ರಾಣಾಂ ಪ್ರಭಾವಃ' ಎಂಬ ಪ್ರೌಢ ಪ್ರಬಂಧವನ್ನು ರಚಿಸಿ ಉಪಾಧಿಯನ್ನು ಪಡೆದರು. ಮುಂದೆ ಭಾರತೀಯ ವಿದ್ಯಾಭವನದ ಮುಂಬಾದೇವೀ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ನಿಯುಕ್ತರಾದರು. ಈ ಸಮಯದಲ್ಲೇ ಭಾರತೀಯ ವಿದ್ಯಾಭವನವು ಪ್ರಾರಂಭಿಸಿದ 'ಸಂವಿದ್' ಎಂಬ ಸಂಸ್ಕೃತ ತ್ರೈಮಾಸಿಕದ ಸಹಾಯಕ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು. ಅಲ್ಲಿ ಐದು ವರ್ಷಗಳ ಸೇವೆಯ ಬಳಿಕ ನಿವೃತ್ತರಾಗಿ ಪುತ್ತೂರಿಗೆ ಮರಳಿದರು. ಮುಂದೆ ಸ್ವಲ್ಪಕಾಲ ಬೆಂಗಳೂರಿನಲ್ಲಿ 'ಜನಪ್ರಗತಿ' ಎಂಬ ವಾರಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡಿದರು. ಆ ವೃತ್ತಿಗೆ ರಾಜೀನಾಮೆಯನ್ನಿತ್ತು 1970ರಲ್ಲಿ ಬೆಂಗಳೂರಿನ ಬಿ. ಪಿ. ಇಂಡಿಯನ್ ಹೈಸ್ಕೂಲ್‌ನಲ್ಲಿ ಸಂಸ್ಕೃತಾಧ್ಯಾಪಕರಾಗಿ ಸೇರಿ ಇಪ್ಪತ್ತೆರಡು ವರ್ಷಗಳ ಸೇವೆಯ ಬಳಿಕ 1993ರಲ್ಲಿ ನಿವೃತ್ತರಾದರು.

1997ರಲ್ಲಿ ಸುಳ್ಯ ತಾಲೂಕಿನ ಅಜ್ಜಾವರದಲ್ಲಿ ಬಯಂಬು ಸಹೋದರರು (ಶ್ರೀ ಶಿವ ರಾವ್ ಮತ್ತು ಶ್ರೀ ಭಾಸ್ಕರ ರಾವ್) ಪ್ರಾರಂಭಿಸಿದ ಶಾರದಾ ರಾಮ ಸೇವಾಪ್ರತಿಷ್ಠಾನದ ಶಂಕರ ಭಾರತೀ ಪಾಠಶಾಲೆಯ ಪ್ರಾಂಶುಪಾಲರಾಗಿ ಅಧಿಕಾರವಹಿಸಿಕೊಂಡರು. ಇಲ್ಲಿ ಹತ್ತು ಪುರೋಹಿತರು ತಯಾರಾದರು. 2001ರಲ್ಲಿ ಬೆಂಗಳೂರಿನ ಕೊಡಿಗೇಹಳ್ಳಿಯಲ್ಲಿ ನಿರ್ಮಾಣವಾದ ದೇವಸ್ಥಾನದಲ್ಲಿ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಅಜ್ಜಾವರದಲ್ಲಿ ಹತ್ತು ವರ್ಷಗಳ ಸೇವೆಯ ಬಳಿಕ 2007ರಲ್ಲಿ ನಿವೃತ್ತರಾಗಿ ಬೆಂಗಳೂರಿಗೆ ಮರಳಿದರು. 2011ರಲ್ಲಿ ಇವರ ಧರ್ಮಪತ್ನಿಯು ನಿಧನರಾಗಲು ವೈರಾಗ್ಯತಾಳಿ 2013ರಲ್ಲಿ ಶೃಂಗೇರಿಯಲ್ಲಿ ಜಗದ್ಗುರುಗಳ ಅನುಮತಿಯಂತೆ ಸನ್ಯಾಸವನ್ನು ಸ್ವೀಕರಿಸಿದರು. ಜಗದ್ಗುರುಗಳು ಮಾಧವಾಶ್ರಮ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಗುರುಗಳ ಆದೇಶದಂತೆ ಘನಪುರೀ ಸಂಸ್ಥಾನ ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠ ಶ್ರೀ ಕಾಮಾಕ್ಷೀ ಶಾರದಾ ಪೀಠಾಧೀಶರಾಗಿ ನಿಯುಕ್ತರಾಗಿ, ಶ್ರೀ ವಿಜಯ ಸಂವತ್ಸರ ಮಾಘ ಶುಕ್ಲ ದಶಮೀ ಭಾನುವಾರ ದಿನಾಂಕ 9–02–2014 ಶುಭದಿನದಂದು ಶ್ರೀ ಶ್ರೀ ಸ್ವಾಮಿಗಳು ಪೀಠಾರೋಹಣ ಮಾಡಿದರು. ಶ್ರೀ ಮಠದ ಪರಂಪರೆಯನ್ನು ಮುಂದುವರೆಸುತ್ತಾ ಶಿಷ್ಯ ಸಮುದಾಯವನ್ನು ವೃದ್ಧಿಸುತ್ತಾ ಶ್ರೀ ಕಾಮಾಕ್ಷೀ ಶಾರದಾ, ಚಂದ್ರಮೌಳೀಶ್ವರ ಶ್ರೀ ಶಂಕರ ಭಗವತ್ಪಾದರ ಕೃಪೆಯೊಂದಿಗೆ ಅವರ ಅದ್ವೈತ ತತ್ವ ಪ್ರಚರಿಸುತ್ತಾ ಸಮಾಜವನ್ನು ನಾಸ್ತಿಕತೆಯಿಂದ ಆಸ್ತಿಕತೆಗೆ ಮುನ್ನಡೆಸುತ್ತಿದ್ದಾರೆ. ಮಠಾಧಿಪತಿಗಳಾದ ಮೇಲೆ ಅನೇಕ ದೇವಸ್ಥಾನಗಳಲ್ಲಿ ಕುಂಭಾಭಿಷೇಕಗಳನ್ನು ನೆರವೇರಿಸಿದ್ದಾರೆ.

**ಆತ್ಮಾರಾಮ ಶಾಸ್ತ್ರಿಗಳು ಗಳಿಸಿರುವ ಉಪಾಧಿಗಳು :**

1. ಸಾಹಿತ್ಯ ಶಿರೋಮಣಿ – ಮದ್ರಾಸ್ ವಿಶ್ವವಿದ್ಯಾಲಯ
2. ವಾಚಸ್ಪತಿ (ಪಿ.ಎಚ್.ಡಿ.) – ಭಾರತೀಯ ವಿದ್ಯಾಭವನ, ಮುಂಬಯಿ
3. ಕನ್ನಡದಲ್ಲಿ ಬಿ. ಎ. – ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
4. ಸಂಸ್ಕೃತದಲ್ಲಿ ಎಂ. ಎ. – ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಆತ್ಮಾರಾಮ ಶಾಸ್ತ್ರಿಗಳು ರಚಿಸಿದ ಕೃತಿಗಳು :**

1. ತಲೇಕಿ ಶ್ರೀನಿವಾಸ ಸುಪ್ರಭಾತಮ್
2. ಕಡಬ ಗಣಪತಿ ಸುಪ್ರಭಾತಮ್
3. ಸೋಕ್ರಟೀಸ್ (ಆರ್. ಡಿ. ಕಾಮತರ ಕನ್ನಡ ನಾಟಕದ ಸಂಸ್ಕೃತ ರೂಪ)
4. ಸಂಸ್ಕಾರ ಸಂಗ್ರಹ ಭಾಗ – 1 (ಪೂರ್ವಷೋಡಶ)
5. ಸಂಸ್ಕಾರ ಸಂಗ್ರಹ ಭಾಗ – 2 (ಅಪರಷೋಡಶ)
   (ಈ ಎರಡೂ ಗ್ರಂಥಗಳ ಪ್ರಕಾಶಕರು ಶಾರದಾರಾಮ ಸೇವಾ ಪ್ರತಿಷ್ಠಾನ, ಬಯಂಬು)
6. ಅಪಶಬ್ದಕೋಶ (ಗಾಯತ್ರೀ ಪ್ರಕಾಶನ, ಕಬ್ಬಿನಾಲೆ)
7. ವಚನರಾಮಾಯಣ. ರಚನೆ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು (ಕಾಮಾಕ್ಷೀ ಪ್ರಕಾಶನ, ಹೆಬ್ಬೂರು)


**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**



# ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ 'ಶಂಕರ ಜಯಂತಿ'







ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಿನಲ್ಲಿ 'ಶಂಕರ ಜಯಂತಿ'ಯನ್ನು ತಾರೀಕು 14–05–2022ನೇ ಶನಿವಾರ ಸಂಜೆ ನಡೆಸಲಾಯಿತು. ಶಂಕರ ಅಷ್ಟೋತ್ತರ ಶತನಾಮಾವಳಿ ಸೇರಿದಂತೆ ವಿವಿಧ ಪಾರಾಯಣಗಳ ಬಳಿಕ ಶ್ರೀ ದುರ್ಗಾ ನಮಸ್ಕಾರ ಪೂಜೆಯ ಸಂಕಲ್ಪವನ್ನು ವೇದಮೂರ್ತಿ ಹೆಜಮಾಡಿ ಶ್ರೀ ಕೃಷ್ಣರಾಜ್ ಭಟ್ ಮತ್ತು ಪುರೋಹಿತರಾದ ಶ್ರೀ ಅರವಿಂದರವರು ನೆರವೇರಿಸಿದರು. ಪೂಜೆಯ ಯಜಮಾನರಾಗಿ ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು ಭಾಗವಹಿಸಿ, ಪ್ರಾಯೋಜಿಸಿದರು. ಡಾ। ಹರಿಹರ ಪ್ರಸಾದ್, H.O.D. ಕರ್ನಾಟಕ ಆಯುರ್ವೇದ ಕಾಲೇಜು, ಮಂಗಳೂರು ತಮ್ಮ ಧಾರ್ಮಿಕ ಉಪನ್ಯಾಸದಲ್ಲಿ ಶಂಕರ ಭಗವತ್ಪಾದರ ಸಾರ್ಥಕ ಜೀವನದ ಬಗ್ಗೆ ತಿಳಿಸುತ್ತಾ, ವೈದಿಕ ಧರ್ಮ ಪುನರ್‌ತ್ಥಾನದಿಂದ ಹೇಗೆ ಹಿಂದೂ ಧರ್ಮ ಸದೃಢವಾಗಿ ಬೆಳೆಯಲು ಕಾರಣವಾಯಿತೆಂದು ಸರ್ವರಿಗೂ ಮನದಟ್ಟಾಗುವಂತೆ ತಿಳಿಸಿದರು. ಅವರಿಗೆ ಶೃಂಗೇರಿ ಜಗದ್ಗುರುಗಳು ಆಶೀರ್ವಾದ ರೂಪದಲ್ಲಿ ನೀಡಿದ ಶಾಲು ಮತ್ತು ಸ್ಮರಣಿಕೆ ನೀಡಲಾಯಿತು. ಮಂಗಳಾರತಿ, ಪ್ರಸಾದ ವಿತರಣೆ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಭಾದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ ಕೃತಾರ್ಥರಾದರು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.